ಮನೆಗೆ ಹೋಗಿದ್ರಂತಲ್ಲ. ರಾಜಿ ಹೇಳಿದ್ಲು. ಅಕ್ಕ ಇಲ್ಲ ಊರಲ್ಲಿ ಅಂತ ಹೇಳಿ ಅವ್ರೂ ಆಗ... ಊರಿಗೋಗಿದ್ಲು. ಹಾಂ! ಆದ್ರೆ ಅದು ತೀರ್ಕಂಡು ಇಪ್ಪತ್ತು ದಿಸ ಆಯ್ತಾ ಬಂತು, ಹೋದವಾರ ಕಣದಣ್ಣಯ್ಯನ ತಿಥೀನೂ ಆಗೋಯ್ತು...'

'ಹೌದಾ? ಇದ್ದಿದ್ರೆ ಈಗ ಮಾತಾಡೋಣ ಅನ್ನಿಸ್ತಿದೆ. ಮಾತಾಡಿದ್ರೆ ಬಾಯಗಲಿಸಿ ಮಕ್ಕಳಂಗೆ ನಗತಿತ್ತು, ಬಿಟ್ರೆ... ದೊಡ್ಡದಾಗಿ ಏನೋ ಮಾತಾಡಿಕೊಂಡು ಹೋಗತಿತ್ತು ಅಜ್ಜ! ನಂಗೆ ಗೊತ್ತೇ ಆಗಲಿಲ್ಲ. ಭಾನುವಾರ ಊರಿಂದ ಬಂದೆ. ನಾಕೈದು ದಿವಸ ಕೆಲ್ಸದಲ್ಲಿ ಹೋಯ್ತು. ಛೇ! ಆಗೀಗ ಕರೆದು ಹಣ್ಣು ಕೊಟ್ರೆ ಈಸ್ಕೊಳ್ಳಿತ್ತು ನಗತಾ...'

ಗೀತಾಳ ಮಾತಿಗೆ ಪದ್ಮ ಜೋರಾಗಿ ನಕ್ಕಳು.

'ನೀವು ಮಾತಾಡಿದ್ರೆ ಅದಕ್ಕೆ ಕೇಳಬೇಕಲ್ಲ! ಅದಕ್ಕೆ ತ್ವಾಟ ದೂರ. ಕಿವಿ ಕೇಳತಿರಲಿಲ್ಲ. ಸೊಸೆ ಒಬ್ಳು, ಜೋರಾಗೆ ರೇಗಳು, 'ತಿರಕೆ ನನ್ಮಗ' ಅಂತ. ಸಾಯೋವರ್ಗೂ ಯಾರ ಕೈ ಕೆಳಗೂ ಬೀಳದಂಗಿದ್ದು ಮಲಗಿದ ಕಡೇಲೆ ಪ್ರಾಣ ಬಿಡ್ತು ಅನ್ನಿ. ನಮ್ಮಣ್ಣ ಹೇಳತಿದ್ರು. ಅದರ ಟ್ರಂಕಲ್ಲಿ 70 ಸಾವ್ರ ದುಡ್ಡಿಟ್ಟಿತ್ತು ಅಂತ, ಅದ್ರಲ್ಲೇ ತಿಥಿ ಊಟ ಹಾಕ್ಸಿದ್ರು ಮಕ್ಕಳು ಅಂತ.'

ಗೀತಾಗೆ ಅಜ್ಜ ಮಾತಾಡದೆ ನಿರ್ಮಲವಾಗಿ ಯಾಕೆ ನಗತಿತ್ತು ಅಂತ ಈಗ ಅರಿವಾಯಿತು. ಹಾಗೇ ಯಾವಾಗಲೂ ಹಾಕಿರುತ್ತಿದ್ದ ಅದರ ದೊಡ್ಡ ಅಳತೆಯ ಚಪ್ಪಲಿಗಳು ಕಣ್ಣಲ್ಲಿಳಿದವು.

ಒಳಗಿಂದ ರಾಜಿ ಎಕ್ಸ್‌ಪ್ರೆಸ್ ಕೆಲಸ ಮುಗಿಸಿ ಬಂದು 'ಬನ್ನಿ ಪದ್ಮಕ್ಕ ಹೋಗಣ' ಅಂದಳು. ಪದ್ಮ ಏಳುತ್ತಾ ತಲೆಯೆತ್ತಿ ಮರವನ್ನು ದಿಟ್ಟಿಸಿ ಹಳೆ ವಾಸನೆಯೊಂದನ್ನು ಗುರುತಿಸಿ, 'ಈ ಮರದ ಹಣ್ಣು ಸೀ ಸಿಪ್ಪಟ್ಟು. ಆದ್ರೆ ನಾರಿಲ್ಲ ಹಿಟ್ಟುಂಡೆ ಥರ, ಕಾಡುಜಾತಿ ಹಣ್ಣಿದು' ಅನ್ನುತ್ತ ಲಾನ್ ಸುತ್ತ ಅರಳಿದ ಹೂಗಳನ್ನ ಸವರುತ್ತ ಹೊರಟಳು. ಗೀತಾ ಇದನ್ನು ಕಂಡು ಒಂದೆರಡು ಸೇವಂತಿಗೆ ಕೊಯ್ದು ಕೈಗೆ ಕೊಟ್ಟು,

'ಬೇಕು ಅಂದಾಗ ನಿಮ್ಮ ಜಾಗ ಅಂತ ಬಂದು ನೋಡಕಂಡು ಹೋಗಿ' ಅಂದಳು.

'ಇವತ್ತು ಈ ಮರದ ಅಂಡೀಲಿ ಕುಂತು ಊರುಮನೆ ವಿಚಾರ ಮಾತಾಡಿದ್ದು ನಂಗೂ ಖುಷಿ ಆಯ್ತು ಗೀತಾವ್ರೇ... ಬಿಟ್ಟು ಎಷ್ಟೋ ವರ್ಷ ಆಗೋಯ್ತಲ್ವ, ಈಗ ಬೇಜಾರೇನೂ ಆಗಲ್ಲ ಅನ್ಕಳಿ. ನೋಡತಾ ಇದ್ರೆ ಪೆಚ್ಚಾಗ್ಬಿಡತೀವಿ ಒಂದೊಂದ್ಸಲ, ಯಾರ್ಯಾರೋ ಇರೋ ಜಾಗಕ್ಕೆ ಬಂದು ಇದು ನಮ್ಮದಾಗಿತ್ತು ಅಂತ ಹೆಂಗೆ ಹೇಳದು, ಕೈ ಜಾರಿದ ಮೇಲೆ ಮುಗೀತು ಋಣ; ನಮೂರಿನವ್ರು ಬಂದ್ರೆ, ವಾಚ್ಮನಪ್ಪ ಗೇಟ್ ಒಳಗೆ ಬಿಡತಾರ ಹೇಳಿ, ಸದ್ಯಕ್ಕೆ ನಾವಿರೋ ಜಾಗನೇ ನಮ್ದು. ಕೊನೆಗೆ ಭೂಮ್ತಾಯಿ ಮನೆ ಒಳಕ್ಕೆ ಹೊಕ್ಕು ಮಲಕ್ಕಂತೀವಲ್ಲ, ಕರಗಿ ಮತ್ತೆ ಗಿಡವಾಗಿ ಬೆಳಿತೀವಲ್ಲ... ಅದನ್ನ ನಮ್ಮದು ಅಂದ್ಕಳಣ ಅಂದ್ರೆ ಆಗ ಎಲ್ಲಿರ್ತೀವೋ? ಗೊತ್ತಿಲ್ಲ. ಬೇಜಾರು ಮಾಡಕಂಬೇಡಿ, ಮಾತಿಗೆ ಹೇಳಿದೆ, ಬರ್ಲಾ' ಎಂದು ಕೈಬೀಸಿ ಹೊರಟವರನ್ನ ನೋಡುತ್ತ ಗೇಟ್ ಬಳಿ ನಿಂತೇ ಇದ್ದಳು ಗೀತಾ.

ತಿರುಗಿ ಪದ್ಮ ನಡೆದು ಬಂದು ಗೀತಾಳಿಗೆ ಹೇಳಿದಳು. 'ನಮ್ಮ ಊರ ಹಬ್ಬಕ್ಕೆ ಬಂದು ಕರೀತೀನಿ, ನಮ್ಮಮ್ಮ ಪಲ್ಲಕ್ಕಿ ಏರೋ ದಿವಸ ನೀವು ಬರಬೇಕು, ನೋಡಕ್ಕೆ ಚೆನ್ನಾಗಿರತ್ತೆ ಗೀತಾ... ಹಂಗೇ ಹತ್ತು ವರುಷದಿಂದ ವರಮಹಾಲಕ್ಷ್ಮಿ ಹಬ್ಬಾನೂ ಜೋರಾಗೇ ಮಾಡಕೊಂಡು ಬರತಿದ್ದೀವಿ. ಅದಕ್ಕೂ ನೀವು ಬರಲೇಬೇಕು.'

'ಆಯ್ತು, ಬರ್ತೀನಿ ಬಿಡಿ. ಆಗಾಗ ಇಲ್ಲಿಗೆ ನೀವೂ ಬಂದು ಹೋಗಿ.'

ಗೀತಾ ಪ್ರೀತಿಯಿಂದ ಕೈ ಬೀಸಿದಾಗ ತಾನೂ ಕೈ ಬೀಸುತ್ತಾ ಈ ಊರಿಂದ ಆ ಊರಿಗೆ ಇದೇ ನೆಲದ ಜೀವವೊಂದು ಸೇತುವೆ ದಾಟುತ್ತಾ ತಿರುವಿನಲ್ಲಿ ಮರೆ ಆಯಿತು.

ಯಾವಾಗಲೂ ತನ್ನ ತವರನ್ನು ನೆನೆದು ಒದ್ದಾಡುತ್ತಿದ್ದ ಅಮ್ಮ ಗೀತಾಳ ತಲೆಯಲ್ಲಿ ಹಕ್ಕೊತ್ತಾಯದಂತೆ ಕರುಳಿನ ಸಂಪರ್ಕ ಸೇತುವೆ ದಾಟಿ ಇವಳತ್ತ ಬಂದಳು. ಬೈಕ್ ಅಪಘಾತದಲ್ಲಿ ತೀರಿಹೋದ ಅಪ್ಪನೂ ಜೊತೆಗಿದ್ದರು. ತವರ ನೆನಪಿನ ಕೊನೆಗೆ ಈಗ ಅಮೆರಿಕದಲ್ಲಿರುವ ಅವಳಣ್ಣ, ಅತ್ತಿಗೆ ಮಗುವಿನೊಂದಿಗೆ ಪ್ರತಿ ಬಾರಿ ಹೊರಟಾಗಲೂ ಏರ್ಪೋರ್ಟಲ್ಲಿ ಕಣ್ಣೀರಾಗುತ್ತಿದ್ದ ಅಮ್ಮನ ಆ ದುಃಖ ಗೀತಾಳಿಗೆ ಒತ್ತರಿಸಿ ಬಂದು ಕಣ್ಣೀರಾಡಿದವು. ಅಂದೆಲ್ಲ ಪದ್ಮಳ ಮಾತಿನ ಜೊತೆಗೆ ಬೀಳಂತೆ ಹೆಣೆದುಕೊಂಡ ತನ್ನ ಊರುಮನೆಯ ಜೀವಗಳು ದಿನಪೂರ್ತಿ ಇವಳನ್ನು ಬಂದು ತಬ್ಬುತ್ತಲೇ ಇದ್ದವು. ಕಣ್ಣ ಪಸೆಯಲ್ಲಿ ನೀರು ಚಿಮ್ಮುತ್ತಲೇ ಇದ್ದವು.

●